ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1108
ಸದಸ್ಯರ ಹೆಸರು : ಶ್ರೀ ಕೆ.ಪಿ.ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 21/09/2021
ಉತ್ತರಿಸುವವರು : ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯಲ್ಲಿನ ಆಸ್ತಿ ತೆರಿಗೆ ನಿಗಧಿಗೆ ಅನುಸರಿಸುತ್ತಿರುವ ಮಾನದಂಡ ಮತ್ತು ನಿಯಮಗಳೇನು;	ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ ಕಲಂ 101 ಮತ್ತು 102ರ ತಿದ್ದುಪಡಿಯಂತೆ ಹಾಗೂ ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ:292724 ಡಿಎಮ್ಎ/ಡಿಇವಿ ಟ್ಯಾಕ್ಸ್/3/2020 ದಿನಾಂಕ:19.02.2021ರ ರೀತ್ಯಾ ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯಲ್ಲಿನ ಎಲ್ಲಾ ರೀತಿಯ ಸ್ವತ್ತುಗಳಿಗೆ ಆಸ್ತಿ ತೆರಿಗೆ ನಿಗಧಿಗೆ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ. ಪ್ರಸ್ತುತ ಸಾಲಿನ ಉಪನೋಂದಣಾಧಿಕಾರಿಗಳ ಮಾರುಕಟ್ಟೆ ಮಾರ್ಗಸೂಚಿ ಬೆಲೆಯ ಶೇಕಡಾ 25 ರಷ್ಟನ್ನು ಮಾತ್ರ ಪರಿಗಣಿಸಲಾಗುತ್ತದೆ. ವಾಸದ ಕಟ್ಟಡಗಳ ಮಾರುಕಟ್ಟೆ ಮೂಲ ಬೆಲೆಯ ಕನಿಷ್ಠ ಶೇಕಡಾ 0.2ಕ್ಕಿಂತ ಕಡಿಮೆ ಇಲ್ಲದಂತೆ ಮತ್ತು ಶೇಕಡಾ 1.5 ಕ್ಕಿಂತ ಹೆಚ್ಚಿಗೆ ಇಲ್ಲದಂತೆ ತೆರಿಗೆಯನ್ನು ವಿಧಿಸಲಾಗುತ್ತದೆ. ಖಾಲಿ ನಿವೇಶನಕ್ಕೆ ಭೂಮಿಯ ಮೂಲ ಬೆಲೆಯ ಮೇಲೆ ಒಂದೇ ರೀತಿಯಾಗಿ ತೆರಿಗೆ ವಿಧಿಸಲು ಕನಿಷ್ಟ ಶೇಕಡಾ 0.2 ಗಿಂತ ಕಡಿಮೆ ಇಲ್ಲದಂತೆ ಮತ್ತು ಗರಿಷ್ಟ ಶೇಕಡಾ 0.5ಕ್ಕಿಂತ ಹೆಚ್ಚಿಗೆ ಇಲ್ಲದಂತೆ ನಿಗಧಿಪಡಿಸಿದೆ. ಕಟ್ಟಡಕ್ಕೆ ಹೊಂದಿಕೊಂಡಿರುವ 1000 ಚದರ ಅಡಿಗಳಿಗಿಂತ ಹೆಚ್ಚಿನ ಅಳತೆಯ ಖಾಲಿ ನಿವೇಶನಕ್ಕೆ ತೆರಿಗೆಯನ್ನು ವಿಧಿಸಲಾಗುತ್ತಿದೆ. ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಕಲಂ 101(2)(ಎ) ರನ್ವಯ ವಾಣಿಜ್ಯ ಕಟ್ಟಡಗಳಿಗೆ ಕನಿಷ್ಟ ಶೇಕಡಾ 0.5 ರಿಂದ ಗರಿಷ್ಟ ಶೇಕಡಾ 3ರ ಮಿತಿಯಲ್ಲಿ ತೆರಿಗೆಗೆ ಗುರಿಪಡಿಸಿ ಸದರಿ ವಾಣಿಜ್ಯ ಕಟ್ಟಡದ ಮೂಲ ಬೆಲೆಯ ಮೇಲೆ ಆಸ್ತಿ ತೆರಿಗೆ ದರವನ್ನು ನಿಗಧಿಪಡಿಸಲಾಗುತ್ತದೆ. ಮಾರುಕಟ್ಟೆ ಮಾರ್ಗಸೂಚಿ ಬೆಲೆಯನ್ನು ಪರಿಷ್ಕರಣೆ ಮಾಡದಿರುವ ವರ್ಷದಲ್ಲಿ ಕನಿಷ್ಠ ಶೇಕಡಾ 3 ಕ್ಕಿಂತ ಕಡಿಮೆ ಇಲ್ಲದಂತೆ ಮತ್ತು ಗರಿಷ್ಟ ಶೇಕಡಾ 5ಕ್ಕಿಂತ ಹೆಚ್ಚಿಗೆ ಇಲ್ಲದಂತೆ ಹೆಚ್ಚಳ ಮಾಡಲಾಗುತ್ತದೆ.

ಆ)	ಸದರಿ ಪುರಸಭೆ ವ್ಯಾಪ್ತಿಯಲ್ಲಿನ ಆಸ್ತಿಗಳಿಗೆ ಎಕರೆಗೆ ಮತ್ತು ಚದರ ಮೀಟರ್ ಅಳತೆಗೆ ಪ್ರಸ್ತುತ ವಿಧಿಸುತ್ತಿರುವ ಆಸ್ತಿ ತೆರಿಗೆ ಎಷ್ಟು;	ನಗರ ಸ್ಥಳೀಯ ಸಂಸ್ಥೆಗಳಲ್ಲಿ ಎಕರೆ ಅಥವಾ ಚದರ ಮೀಟರ್‌ಗೆ ಇಂತಿಷ್ಟು ತೆರಿಗೆ ಎಂದು ನಿಗಧಿಪಡಿಸುವುದಿಲ್ಲ. ಸ್ವತ್ತಿನ ಮೌಲ್ಯವನ್ನು ಪರಿಗಣಿಸಿ (Capital Value System) ಸ್ವತ್ತಿನ ಮೌಲ್ಯಕ್ಕೆ ತೆರಿಗೆ ದರವನ್ನು ನಿಗಧಿಪಡಿಸಲಾಗುವುದು. ಚಿಕ್ಕಬಾಣವರ ಪುರಸಭೆ ವ್ಯಾಪ್ತಿಯಲ್ಲಿನ ನಿವೇಶನಗಳಿಗೆ ವಿಧಿಸುತ್ತಿರುವ ತೆರಿಗೆಯದರಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.
ಇ)	ಕಂದಾಯ ಭೂಮಿಯು ಗುಂಟೆ ಲೆಕ್ಕದಲ್ಲಿದ್ದಲ್ಲಿ ಎಕರೆಗೆ ನಿಗಧಿಪಡಿಸಿರುವ ಮೌಲ್ಯದಷ್ಟೇ ಆಸ್ತಿ ತೆರಿಗೆ ವಿಧಿಸಲಾಗುವುದೇ; ಅಥವಾ ಚದರ ಮೀಟರ್ ಅಳತೆಗೆ ನಿಗಧಿಪಡಿಸಿರುವ ಮೌಲ್ಯದಷ್ಟೇ ಆಸ್ತಿ ತೆರಿಗೆಯನ್ನು ವಿಧಿಸಲಾಗುವುದೇ? (ವಿವರಿಸುವುದು)	

ಸಂಖ್ಯೆ: ನಅಇ 201 ಜಿಇಎಲ್ 2021(ಇ)

ಎನ್. ನಾಗರಾಜು (ಎಂ.ಟಿ.ಬಿ)
ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

ಅನುಬಂಧ

ಕ್ರ. ಸಂ.	ಪ್ರದೇಶದ ಹೆಸರು	2021-22 ನೇ ಸಾಲಿನ ಉಪನೋಂದಣಾಧಿಕಾರಿಗಳ ಮಾರ್ಗಸೂಚಿಯಂತೆ ಕಟ್ಟಡ ಮತ್ತು ಖಾಲಿ ಜಾಗಗಳಿಗೆ ನಿಗಧಿಪಡಿಸುತ್ತಿರುವ ತೆರಿಗೆ				
		ವಾಸೋಪಯೋಗಿ		ವಾಣಿಜ್ಯ	ಕೈಗಾರಿಕೆ	ಅಪಾರ್ಟ್‌ಮೆಂಟ್
		1 ಚದರ ಅಡಿಗೆ				
		ಮನೆ	ಖಾಲಿ ಜಾಗ			
1	ಕೆರೆಗುಡ್ಡದಹಳ್ಳಿ	0.295%	0.2%	0.47%	0.47%	–
2	ಲೇಕ್ ಫ್ರ್ಯೂಗಾರ್ಡನ್ ಸರ್ವೆ 29/1,29/5,29/2	0.295%	0.2%	0.3%	–	–
3	ಎಸ್.ಮುನಿರಾಜು ಬಡಾವಣೆ, ಶ್ರೀ ವಿನಾಯಕ ನಗರ 1ನೇ ಫೇಸ್, ಶ್ರೀ ವಿನಾಯಕ ನಗರ 2ನೇ ಫೇಸ್	0.295%	0.2%	0.3%	0.3%	–
4	ಕೆರೆಗುಡ್ಡದಹಳ್ಳಿ-ಚಿಕ್ಕಬಾಣಾವರ-ಅಬ್ಬಿಗೆರೆ ಮ್ಯೆನ್‌ರೋಡ್, ವಿಯಾ ಅಬ್ಬಿಗೆರೆ ಗ್ರಾಮ, ಗ್ಯಾಸ್ ಪೈಪ್ ಲೈನ್‌ರಸ್ತೆ, ಕೆರೆಗುಡ್ಡದಹಳ್ಳಿ & ದಾಸಪ್ಪನಪಾಳ್ಯ	0.21%	0.2%	0.25%	0.25%	–
5	ಗಾಣಿಗರಹಳ್ಳಿ	0.44%	0.3%	0.7%	0.7%	–
6	ಚಿಕ್ಕಬಾಣಾವರ	0.25	0.31	0.81	0.81	
7	ಸರ್ವೆ ನಂ.81/ಎ, 86, 87, 88, 118/1, 118/2, 118/1ಎ, 118/2ಎ, 118/2ಬಿ, 119, 120/1, 120/2, 120/2, 121, 123/4, 124, 134, 135/1, 135/2, 136/1, 136/2, 137, 138/1, 139/1, 141 ಗಳಲ್ಲಿ ಚಿಕ್ಕಬಾಣಾವರ ಪೆರಿಫೆರಲ್‌ರಿಂಗ್‌ರಸ್ತೆಗೆ ಹೊಂದಿಕೊಂಡಿರುವ ಸ್ವತ್ತುಗಳಿಗೆ ಸರ್ವೆ ನಂ.81ಕ 86,87,88,118,119,120,121,122, 123,136, 137,141,146,139,138,134,135,125,126,124 ಗಳಲ್ಲಿ ಚಿಕ್ಕಬಾಣಾವರ ಹೆಸರಘಟ್ಟ ರಸ್ತೆಗೆ ಹೊಂದಿಕೊಂಡಿರುವ ಸ್ವತ್ತುಗಳಿಗೆ.	0.25	0.31	0.81	0.81	
8	ಕೃಷ್ಣ ಕಾಲೇಜ್ ಮುಖ್ಯರಸ್ತೆ	0.2%	0.2%	0.42%	0.42%	–
9	ಸೋಮಶೆಟ್ಟಿಹಳ್ಳಿ	0.25%	0.2%	0.41%	0.41%	–
10	ಡಿ.ಎಸ್.ಮ್ಯಾಕ್ಸ್ ಸ್ಮಾರ್ಟ್‌ನೆಸ್ಟ್‌ಅಪಾರ್ಟ್‌ಮೆಂಟ್ (ಸರ್ವೆ ನಂ.4/2, ಖಾತಾ ನಂ.103/4/2 & ಎಸ್+ಜಿ+4 ಯುಎಫ್) ReraNo. PRM/KA/RERA/1251/309//ಖ/180516/001703	–	–	–	–	0.35%
11	ಜನಪ್ರಿಯಾಗ್ರೀನ್‌ವುಡ್‌ಅಪಾರ್ಟ್‌ಮೇಂಟ್ಸ್, ಸೋಮಶೆಟ್ಟಿಹಳ್ಳಿ	–	–	–	–	0.25%
12	ಇಂದ್ರಧನುಷ್, ಸರ್ವೆ ನಂ.7, ಡಿ.ಎಸ್.ಮ್ಯಾಕ್ಸ್, ಸರ್ವೆ ನಂ.28/6 , ಎನ್.ಎನ್.ಹೋಮ್ಸ್	–	–	–	–	0.3%
13	ವಿ.ಎನ್.ಎನ್ ಹೋಮ್ಸ್, ರೂಬಿ ಎನ್‌ಕ್ಲೇವ್ (ಸರ್ವೆ ನಂ.28/6, ಖಾತಾ ನಂ.1104/28/6)	–	–	–	–	0.3%
14	ನೀರಜ್‌ಅಪಾರ್ಟ್‌ಮೇಂಟ್ಸ್ (ಸರ್ವೆ ನಂ.9/2, ನಿವೇಶನ ಸಂಖ್ಯೆ: 16,17,18,1920,21 ಖಾತಾ ನಂ.308	–	–	–	–	0.2%
15	ಗ್ಲೋಬಲ್ ನಂದನಂ (ಸರ್ವೆ ನಂ.6)	–	0.2%	–	–	0.28%

Project Director
District Urban Development Cell
Bangalore Urban District